impact
www.impactmeasurement.co.in

Date : 16-Mar-2006 | Edition : Bangalore | Page No.: 11 | Page Name: Vanijya- Rashtriya | Size: 100%

Sector: IT | Circulation: 950000 | AVE: Rs.166565.38 | Frequency: Daily

Publication: Prajavani | Title: Kannada keyboard from HP

ಪ್ರಜಾವಾಣಿ



ಎಚ್‌ಪಿ ಸಂಸ್ಥೆ ಅಭಿವೃದ್ಧಿಪಡಿಸಿರುವ ಕನ್ನಡ ಕೀಬೋರ್ಡ್‌ನ್ನು ಬುಧವಾರ ಬೆಂಗಳೂರಿನಲ್ಲಿ ಪತ್ರಿಕಾ ಪ್ರತಿನಿಧಿಗಳಿಗೆ ಪ್ರದರ್ಶಿಸಲಾಯಿತು. ಎಚ್‌ಪಿ ಲ್ಯಾಬ್ಸ್‌ನ ಸಂಶೋಧನೆ ವಿಭಾಗದ ಹಿರಿಯ ಉಪಾಧ್ಯಕ್ಷ ಡಿಕ್‌ಲ್ಯಾಂಪ್‌ಮನ್ ಮತ್ತು ಎಚ್‌ಪಿ ಲ್ಯಾಬ್ಸ್ ಇಂಡಿಯಾದ ನಿರ್ದೇಶಕ ಅಜಯ್ ಗುಪ್ತಾ ಚಿತ್ರದಲ್ಲಿದ್ದಾರೆ.

# ಎಚ್‌ಪಿಯಿಂದ ಕನ್ನಡ ಕೀಬೋರ್ಡ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಚ್‌ಪಿಯಿಂದ ಕ್ರಾಂತಿಕಾರಿ ಪೆನ್ ಆಧಾರಿತ ತಂತ್ರಜ್ಞಾನವನ್ನು ಪರಿಚಯಿಸಲಾಗಿದ್ದು, ಇದರಿಂದ ಕನ್ನಡ ಲಿಪಿಯನ್ನು ನೇರವಾಗಿ ಕಂಪ್ಯೂಟರ್‌ನಲ್ಲಿ ಬರೆಯಲು ಸಾಧ್ಯವಾಗಲಿದೆ.

ಈ ಸಂಗತಿಯನ್ನು ಎಚ್‌ಪಿ ಲ್ಯಾಬ್ಸ್‌ನ ಸಂಶೋಧನೆ ವಿಭಾಗದ ಹಿರಿಯ ಉಪಾಧ್ಯಕ್ಷ ಹಾಗೂ ನಿರ್ದೇಶಕ ಡಿಕ್‌ಲ್ಯಾಂಪ್‌ಮನ್ ಮತ್ತು ಎಚ್‌ಪಿ ಲ್ಯಾಬ್ಸ್ ಇಂಡಿಯಾದ ನಿರ್ದೇಶಕ ಅಜಯ್ ಗುಪ್ತಾ ಅವರು ಬುಧವಾರ ಬೆಂಗಳೂರಿನಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಈ ತಂತ್ರಜ್ಞಾನದಿಂದ ಇಂಗ್ಲಿಷ್ ಅಥವಾ ಟೈಪಿಂಗ್‌ನ ಪೂರ್ವ ಜ್ಞಾನ ಇಲ್ಲದವರು ಸಹ ನೇರವಾಗಿ ಕಂಪ್ಯೂಟರ್‌ನ್ನು ಬಳಸುವುದು ಸಾಧ್ಯ ಎಂದು ಅವರು ತಿಳಿಸಿದರು.

ಎಚ್‌ಪಿ ಲ್ಯಾಬ್ಸ್ ಇಂಡಿಯಾದ ಸಂಶೋಧಕರು ಅಭಿವೃದ್ಧಿಪಡಿಸಿರುವ ಗೆಶ್ಚರ್ ಬೇಸ್ಡ್ ಕೀಬೋರ್ಡ್(ಜಿಕೆಬಿ)ದಲ್ಲಿ ಎಲ್ಲ ಭಾರತೀಯ ಭಾಷೆಗಳ ಕೀಬೋರ್ಡ್‌ಗಳನ್ನು ಸಿದ್ಧಪಡಿಸಲಾಗುವುದು. ಕನ್ನಡದ ಕೀಬೋರ್ಡ್ ಈ ತಿಂಗಳ ಅಂತ್ಯದೊಳಗೆ ಮಾರುಕಟ್ಟೆಯಲ್ಲಿ ಲಭ್ಯವಾಗಲಿದ್ದು, ಇದರ ಬೆಲೆ ಇನ್ನೂ ನಿಗದಿಯಾಗಿಲ್ಲವಾದರೂ ಅಂದಾಜು ಎರಡು ಸಾವಿರ ರೂಪಾಯಿವರೆಗೆ ಇರುತ್ತದೆ ಎಂದು ಗುಪ್ತಾ ತಿಳಿಸಿದರು.

ತಮಿಳು ಕೀಬೋರ್ಡ್ ಕೂಡ ಈಗಾಗಲೇ ಸಿದ್ಧವಾಗಿದೆ. ಅದೇ ರೀತಿ ಗುಜರಾತಿ, ಬಂಗಾಳಿ ಸೇರಿದಂತೆ ಇತರ ಕೆಲಸ ಭಾಷೆಗಳಲ್ಲಿ ಕೀಬೋರ್ಡ್ ಸಿದ್ಧಪಡಿಸಲು ಆಯಾ ರಾಜ್ಯಗಳಲ್ಲಿ ಪಾಲುದಾರರನ್ನು ಶೋಧಿಸಲಾಗುತ್ತಿದೆ. ಅಲ್ಲದೇ ನೇಪಾಳ, ಬಾಂಗ್ಲಾದೇಶ ಮತ್ತು ಶ್ರೀಲಂಕಾದಲ್ಲೂ ಕೂಡ ಸ್ಥಳೀಯ ಭಾಷೆಯ ಕೀಬೋರ್ಡ್‌ಗಳನ್ನು ಅಭಿವೃದ್ಧಿಪಡಿಸಲಾಗುವುದು ಎಂದು ಅವರು ತಿಳಿಸಿದರು.

ಈ ಜಿಕೆಬಿಯಿಂದ ತಂತ್ರಜ್ಞಾನ ಅಂತರವನ್ನು ಕಡಿಮೆ ಮಾಡಲು ಮತ್ತು ಮಾಹಿತಿ ತಂತ್ರಜ್ಞಾನದ ಉಪಯೋಗ ಸಮಾಜದ ಎಲ್ಲರಿಗೂ ಸಿಗುವಂತೆ ಮಾಡಲು ಅನುಕೂಲವಾಗುತ್ತದೆ ಎಂದು ಡಿಕ್ ಅಭಿಪ್ರಾಯಪಟ್ಟರು.

ಇದರಲ್ಲಿ, ಮುಖ್ಯ ಉಪಕರಣವಾಗಿ ಪೆನ್ ಇರುತ್ತದೆ. ಸಾಮಾನ್ಯವಾಗಿ ಎಲ್ಲರೂ ಲೇಖನಿ ಬಳಸಿಯೇ ಬರವಣಿಗೆ ಕಲಿತಿರುವುದರಿಂದ ಇದು ಸುಲಭ ಮತ್ತು ಸರಳ ಪರಿಹಾರವಾಗಿದೆ. ಇದರ ಬಗ್ಗೆ ಸಮೀಕ್ಷೆ ನಡೆಸಿದಾಗಲೂ ಇದೇ ಅಭಿಪ್ರಾಯ ವ್ಯಕ್ತವಾಗಿದೆ ಎಂದು ಗುಪ್ತಾ ವಿವರಿಸಿದರು.



© Prajavani